**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್ ಜವರಾಯಿಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:-**

ದಿನಾಂಕ:05-03-2025ರ ರಾಜ್ಯದ ಪ್ರಮುಖ ವಿಜಯವಾಣಿ ಪತ್ರಿಕೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾಕರ್ಮಿಗಳ ಸಂಖ್ಯೆ ತೀರಾ ಕಡಿಮೆ ಇರುವ ಕಾರಣ ಹೊಸ ನೇಮಕಾತಿ ಮಾಡಕೊಳ್ಳಲು ಹಲವು ವರ್ಷದಿಂದ ಒತ್ತಾಯ ಮಾಡುತ್ತಿರುವುದರ ಮೇರೆಗೆ ಪೌರಕಾರ್ಮಿಕರ ಹುದ್ದೆಗಳ ನೇಮಕ ಪ್ರಕ್ರಿಯೆಯಲ್ಲಿ ಅನರ್ಹರಿಗೆ ಬಿ.ಬಿ.ಎಂ.ಪಿ. ಅಕ್ರಮವಾಗಿ ಹಲವರ ಹೆಸರನ್ನು ಪಟ್ಟಿಗೆ ಸೇರಿಸುವಿಕೆ ಹಿಂದೆ ಕಾಣದ ಕೈ ಕೆಲಸ ಮಾಡಿರುವುದರಿಂದ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕೋರಿ ಮಾನ್ಯ ಲೋಕಾಯುಕ್ತಕ್ಕೆ ದೂರು ದಾಖಲಿಸಿರುವ ಬಗ್ಗೆ ವರದಿಯಾಗಿದೆ. 2022-23 ಮತ್ತು 2023-24ನೇ ಸಾಲಿನಲ್ಲಿ ಕ್ರಮವಾಗಿ 11,307 ಹಾಗೂ 3,673 ಪೌರಕಾರ್ಮಿಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಗೊಳಿಸಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಕನಿಷ್ಠ 2 ವರ್ಷ ದಿನಗೂಲಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಮತ್ತು ಕನ್ನಡ ಬಾರದೆ ಇರುವವರನ್ನು ಹಾಗೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಲ್ಲದವರಿಗೂ ಹುದ್ದೆ ನೀಡಲಾಗಿದ್ದು, ಸರ್ಕಾರ ನೀಡಿದ್ದ ಸೂಚನೆ ಮೀರಿ ಆಯ್ಕೆ ಪಟ್ಟಿ ತಯಾರಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಈ ಬಗ್ಗೆ ಸರ್ಕಾರ ವಿವರವಾಗಿ ಪರಿಶೀಲಿಸಿ, ಈಗ ತಯಾರಿಸಿರುವ ನೇಮಕಾತಿ ಪಟ್ಟಿಯನ್ನು ರದ್ದುಪಡಿಸಿ, ಕನ್ನಡ ಪರೀಕ್ಷೆ ನಡೆಸುವುದು ಮತ್ತು ಪ್ರಮಾಣ ಪತ್ರಗಳನ್ನು ಪೊಲೀಸ್ ಪರಿಶೀಲನೆ ಪ್ರಕ್ರಿಯೆ ನಡೆಸುವುದರ ಜೊತೆಗೆ ನೇಮಕಾತಿ ನಿಯಮವನ್ನು ಅನುಸರಿಸಿ, ಅರ್ಹರಿಗೆ ಪೌರಕಾರ್ಮಿಕರ ಹುದ್ದೆ ಲಭಿಸುವಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ.

**ಉತ್ತರ:-**

ದಿನಾಂಕ:05-03-2025 ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರ ನೇಮಕಾತಿಯಲ್ಲಿ ಅನರ್ಹರನ್ನು ಅಕ್ರಮವಾಗಿ ಆಯ್ಕೆ ಪಟ್ಟಿಗೆ ಸೇರಿಸಿರುವ ಬಗ್ಗೆ ತಪ್ಪಿತಸ್ಥರ ಬಗ್ಗೆ ಕ್ರಮ ಕೈಗೊಳ್ಳುವಂತೆ ಮಾನ್ಯ ಲೋಕಾಯುಕ್ತ ರವರಿಗೆ ದೂರು ದಾಖಲಿಸಿರುವ ಬಗ್ಗೆ ಮತ್ತು ಕನಿಷ್ಟ 2 ವರ್ಷ ದಿನಗೂಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಮತ್ತು ಕನ್ನಡ ಬಾರದೆ ಇರುವವರನ್ನು ಹಾಗೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಲ್ಲದವರಿಗೂ ಹುದ್ದೆ ನೀಡಲಾಗಿದೆ ಎಂದು ಸರ್ಕಾರದ ನಿಯಮವನ್ನು ಮೀರಿ ಪ್ರಕಟಿಸಿರುವುದಾಗಿ ಆರೋಪಿಸಿರುವ ಸಂಬಂಧ ಪರಿಶೀಲಿಸಲಾಗಿದೆ.

ಪಾಲಿಕೆಯ ವೃಂದ ಮತ್ತು ನೇಮಕಾತಿಯ ಪ್ರಕಾರ ಮೇಸ್ತ್ರಿ (ಸೂಪರ್ ವೈಸರ್)ಎಂಬ ಹುದ್ದೆ ಇರುವುದಿಲ್ಲ. ಪೌರಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಬಯೋಮೆಟ್ರಿಕ್ ಹಾಜರಾತಿ ಪಡೆಯಲು ಇತರೆ ಉಸ್ತುವಾರಿಗಾಗಿ ಪೌರಕಾರ್ಮಿಕರನ್ನೇ ಮೇಲ್ವಿಚಾರಕರಾಗಿ ನೇಮಿಸಲಾಗಿರುತ್ತದೆ. ಈ ಬಗ್ಗೆ ಹಿಂದೆಯೆ ಅಂದರೆ ಬಿಬಿಎಂಪಿ ಕಛೇರಿ ಆದೇಶ ಸಂಖ್ಯೆ: ಆ.ಆ.ಶಾ/ಪಿಆರ್/(ಜಿ)7562/17-18, ದಿನಾಂಕ:06-02-2018 ರಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರಕಾರ್ಮಿಕರಿಗೆ ಬಯೋಮೆಟ್ರಿಕ್ ಮುಖಾಂತರ ನೇರವಾಗಿ ಪಾಲಿಕೆ ವತಿಯಿಂದ ವೇತನವನ್ನು ನೀಡಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಆಗ ಕಾರ್ಯನಿರ್ವಹಿಸುತ್ತಿದ್ದು, ಮೇಸ್ತ್ರಿಗಳಿಗೂ (ಗುತ್ತಿಗೆ ಮೇಲ್ವಿಚಾರಕರು) ಪೌರಕಾರ್ಮಿಕರಿಗೆ ನಿಗದಿಪಡಿಸಿದ ವೇತನ ಬಟವಾಡೆಯನ್ನು ಪಾವತಿಸಲು ಆದೇಶಿಸಲಾಗಿರುತ್ತದೆ. ಸದರಿ ಆದೇಶ ಮೇರೆಗೆ ಮೇಸ್ತ್ರಿಗಳಿಗೆ (ಗುತ್ತಿಗೆ ಮೇಲ್ವಿಚಾರಕರು) ಯಾವುದೇ ವಿಶೇಷ ಶ್ರೇಣಿ ಅಥವಾ ಕೆಲಸ ಕಾರ್ಯಗಳ ಹಂಚಿಕೆಗಳಲ್ಲಿ ಪೌರಕಾರ್ಮಿಕರ ಸಮಾನಂತರವಾಗಿ ಪರಿಗಣಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ದಿನಾಂಕ: 06-02-2018 ರ ಆದೇಶವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:11423/2018 ಮತ್ತು 11826/2018(S-RES) ಕೆಲವರು ಮೇಸ್ತ್ರಿಗಳನ್ನು ಪೌರಕಾರ್ಮಿಕರನ್ನಾಗಿ ಪರಿಗಣಿಸಿರುವುದನ್ನು ಪ್ರಶ್ನಿಸಿದ್ದು, ಸದರಿ ಅರ್ಜಿಯನ್ನು ದಿನಾಂಕ: 12-03-2019 ರಂದು ಮಾನ್ಯ ಉಚ್ಚ ನ್ಯಾಯಾಲಯವು ವಜಾ ಮಾಡಿರುತ್ತದೆ. ಆದ್ದರಿಂದ ಮೇಸ್ತ್ರಿಗಳನ್ನು ಪೌರಕಾರ್ಮಿಕರಾಗಿ ವಿಶೇಷ ನೇಮಕಾತಿಯಲ್ಲಿ ಪರಿಗಣಿಸಿರುವುದು ಕ್ರಮಬದ್ಧವಾಗಿರುತ್ತದೆ.

ಮುಂದುವರೆದು, ವಿಶೇಷ ನೇಮಕಾತಿ ನಿಯಮಗಳ ಅನುಸಾರ ಕನ್ನಡ ಭಾಷೆ ಮಾತನಾಡಲು ತಿಳಿದಿರುವ ಅಭ್ಯರ್ಥಿಗಳನ್ನು ಈ ಹುದ್ದೆಗಳಿಗೆ ಆಯ್ಕೆ ಮಾಡಬೇಕಾಗಿರುತ್ತದೆ. ಹಾಗೂ ಪಾಲಿಕೆಯಲ್ಲಿ ಕನಿಷ್ಟ 02 ವರ್ಷಗಳ ಸೇವೆ ಸಲ್ಲಿಸಿರುವ ನೇರ ವೇತನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮಾತ್ರ ಖಾಯಂ ಆಗಲು ಅರ್ಹರಿರುತ್ತಾರೆ. ಈ ಹುದ್ದೆಗೆ ಯಾವುದೇ ಶೈಕ್ಷಣಿಕ ವಿದ್ಯಾರ್ಹತೆ ಅಗತ್ಯವಿರುವುದಿಲ್ಲ. ಈ ನಿಟ್ಟಿನಲ್ಲಿ ಪಾಲಿಕೆಯಿಂದ ಹೊರಡಿಸಿರುವ ಅಂತಿಮ ಆಯ್ಕೆ ಪಟ್ಟಿಯ ಅನುಸಾರ ಆಯ್ಕೆಯಾಗಿರುವ ಪೌರಕಾರ್ಮಿಕರ ದಾಖಲೆಗಳನ್ನು ಆಯಾ ವಲಯ ಮಟ್ಟದಲ್ಲಿ ಜಂಟಿ ಆಯುಕ್ತರ ನೇತೃತ್ವದಲ್ಲಿ ಪರಿಶೀಲಿಸಲು ಕ್ರಮ ಕೈಗೊಳ್ಳಲಾಗಿದೆ. ದಾಖಲೆ ಪರಿಶೀಲನಾ ಸಂದರ್ಭದಲ್ಲಿ ನೇರವೇತನ ಪಾವತಿಯಡಿ ಕಾರ್ಯನಿರ್ವಹಿಸುತ್ತಿದ್ದು, ಇನ್ನಿತರ ದಾಖಲಾತಿಗಳ ಪರಿಶೀಲನೆ ಜೊತೆ ಕನ್ನಡ ಭಾಷೆ ಮಾತನಾಡಲು ಬರುವುದನ್ನು ಖಾತ್ರಿ ಪಡಿಸುಕೊಳ್ಳುವ ಬಗ್ಗೆ ಸಹ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ದಾಖಲಾತಿ ಪರಿಶೀಲನೆ ಮುಕ್ತಾಯ ಹಂತದಲ್ಲಿದ್ದು, ಈವರೆಗೆ ಪರಿಶೀಲನೆ ಸಮಯದಲ್ಲಿ ಮಹದೇವಪುರ ವಲಯದಲ್ಲಿ ಒಟ್ಟು 11 ಮತ್ತು ದಾಸರಹಳ್ಳಿ ವಲಯದಲ್ಲಿ 01 ಅಭ್ಯರ್ಥಿಗೆ ಕನ್ನಡ ಮಾತನಾಡಲು ಬರುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಆದ್ದರಿಂದ, ಪಾಲಿಕೆಯ ಶಿಕ್ಷಣ ವಿಭಾಗದ ಆಯ್ದ ಕನ್ನಡ ಅಧ್ಯಾಪಕರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ತರಬೇತಿಗೆ ನಿಯೋಜಿಸಿ ಅವರ ಮುಖಾಂತರ ಕನ್ನಡ ಭಾಷೆ ಮಾತನಾಡಲು ಬಾರದ ಪೌರಕಾರ್ಮಿಕರಿಗೆ ಕನ್ನಡ ಭಾಷೆಯನ್ನು ಕಲಿಸಲು ಮತ್ತು ಈ ಬಗ್ಗೆ ಕನ್ನಡ ಮಾತನಾಡಲು ಬರುತ್ತದೆ ಎಂಬ ಬಗ್ಗೆ ಧೃಡೀಕರಣ ಪಡೆದ ನಂತರವೇ ನೇಮಕಾತಿ ಆದೇಶವನ್ನು ನೀಡುವ ಬಗ್ಗೆ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

.3..

ಹಾಲಿ 2 ಅಧಿಸೂಚನೆಗಳ ಪ್ರಕಾರ ಒಟ್ಟು 3,673 ವಿಶೇಷ ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳು ಹಾಗೂ 11,307 ಸಂಖ್ಯಾತಿರಿಕ್ತ ಪೌರಕಾರ್ಮಿಕರ ಹುದ್ದೆಗಳಿಗೆ ಸರ್ಕಾರವು ವಿವಿಧ ದಿನಾಂಕಗಳಲ್ಲಿ ನೀಡಿರುವ ವಿಶೇಷ ನೇಮಕಾತಿ ನಿಯಮಗಳ ಅಡಿಯಲ್ಲಿ ಆಯ್ಕೆ ಪ್ರಕ್ರಿಯೆಗೆ ಕ್ರಮವಹಿಸಿದ್ದು, ಅದರಂತೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಒಟ್ಟು 12,692 ನೇರವೇತನ ಪೌರಕಾರ್ಮಿಕರ ನೇಮಕಾತಿ ಸಂಬಂಧವಾಗಿ ಪೊಲೀಸ್ ಪರಿಶೀಲನೆ ಪ್ರಕ್ರಿಯೆ ಮತ್ತು ಮೀಸಲಾತಿ ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಸೇವಾಸಿಂಧು ಪೋರ್ಟಲ್ ಮುಖಾಂತರ ಪರಿಶೀಲನೆ ಕಾರ್ಯ ನಡೆಯುತ್ತಿದೆ. ಈವರೆಗೆ ಯಾರಿಗೂ ನೇಮಕಾತಿ ಆದೇಶ ನೀಡಿರುವುದಿಲ್ಲ.

---

**ಸಂಖ್ಯೆ: ನಅಇ 130 ಬಿಬಿಎಲ್ 2025 (ಇ)**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ